2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

**ಸತ್ರ ಮೊಕದ್ದಮೆ ನಂಃ 102/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಡಾ. ಎಸ್. ವೆಂಕಟರಾಘವ್ | ಪಿಡಬ್ಲ್ಯೂ - 13 |
| ತಂದೆಯ ಹೆಸರು | - | ಲೇಟ್ ಶ್ರೀನಿವಾಸ್ ಮೂರ್ತಿ | ಸಿಡಬ್ಲ್ಯೂ - 17 |
| ವಯಸ್ಸು | - | 49 ವರ್ಷ | |
| ಉದ್ಯೋಗ | - | ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,<br>ವಿಧಿ ವೈದ್ಯ ಶಾಸ್ತ್ರ ವಿಭಾಗ,<br>ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು | |
| ವಾಸ ಸ್ಥಳ | - | ಬೆಂಗಳೂರು | |

ದಿನಾಂಕಃ 08-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನಾನು ಆಗಸ್ಟ್ 2000 ದಿಂದ ಇಲ್ಲಿಯವರೆಗೆ ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಇಲ್ಲಿ ನಾನಾ ಹುದ್ದೆಗಳಲ್ಲಿ ಕಾರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿಃ 28.02.2016 ರಂದು ಬೆಂಗಳೂರು ಉತ್ತರ ತಾಲ್ಲೂಕಿನ ವಿಶೇಷ ತಹಶೀಲ್ದಾರವರ ಮನವಿ ಪತ್ರದ ಮೇರೆಗೆ ಶ್ರೀಮತಿ ಅನಿತಾ, ಅಂದಾಜು 21 ವರ್ಷ ವಯಸ್ಸಿನ ಮಹಿಳೆಯ ಶವ ಪರೀಕ್ಷೆಯನ್ನು ಅದೇ ದಿನ ಮಧ್ಯಾಹ್ನ 2.30 ರಿಂದ 3.15 ರವರೆಗೆ ವಿಕ್ಟೋರಿಯಾ ಆಸ್ಪತ್ರೆಯ ಶವಗಾರದಲ್ಲಿ ನೆರವೇರಿಸಿರುತ್ತೇನೆ.

ಮೃತ ದೇಹದ ಹೊರ ಚಹರೆಗಳನ್ನು ಗಮನಿಸಿರುತ್ತೇನೆ. ಮೃತ ದೇಹದ ಉದ್ದ 152 cm ಇದ್ದು ವಯಸ್ಸಿಗೆ ತಕ್ಕಂತೆ ಬೆಳವಣಿಗೆಯಾಗಿರುತ್ತದೆ. ಮರಣಾ ನಂತರ ಸ್ನಾಯುಗಳ ಬಿಗಿತ ಇಡೀ ದೇಹವನ್ನು ಆವರಿಸಿರುತ್ತದೆ. ಮರಣಾ ನಂತರ ಕಲೆಗಳು ಬೆನ್ನಿನ ಮೇಲೆ ಮೂಡಿರುತ್ತದೆ. 2 ಹಸ್ತಗಳ ಹಿಂಬದಿಯಲ್ಲಿ ಚುಚ್ಚು ಮದ್ದಿನ ನಳಿಕೆ ಇರುತ್ತದೆ. Foleys ಮೂತ್ರನಳಿಕೆ intact ಇರುತ್ತದೆ.

3. ಮೃತ ದೇಹದ ಮೇಲೆ ಈ ಕೆಳಗಿನಂತೆ ಗಾಯಗಳು ಕಂಡು ಬಂದಿರುತ್ತದೆ.

   1. ಮೃತಳ ಉದರದ ಮುಂಭಾಗದ ಕೆಳಭಾಗದಲ್ಲಿ 10 cm x 7 cm ವಿಸ್ತಿರಣದಲ್ಲಿ ಒಂದು ಕಂದು ಗಟ್ಟಿದ ಗಾಯವಾಗಿರುತ್ತದೆ. ಉದರದ ಗೋಡೆಯನಡ್ನು ಛೇದಿಸಿ ಪರೀಕ್ಷಿಸಿದಾಗ ಉದರದ ಮಾಂಸ ಖಂಡಗಳಲ್ಲಿ ರಕ್ತ ಜಿನಿಗಿರುತ್ತದೆ.

4. ಮೃತ ದೇಹವನ್ನು ಛೇದಿಸಿ ಪರೀಕ್ಷಿಸಿದಾಗ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತದೆ.

   1. ಮೃತಳ ಗರ್ಭಕೋಶದ ತೂಕ 260 ಗ್ರಾಂ ಇದ್ದು ಅದರ 14 x 11 X 6 cm ವಿಸ್ತಿರಣವಿದ್ದು ಅದರಲ್ಲಿ ರಕ್ತದ ಕಲೆಗಳುಳ್ಳ ಒಂದು ಹತ್ತಿಯ ಬಟ್ಟೆ ಇರುತ್ತದೆ. ಗರ್ಭಕೋಶವನ್ನು ಕತ್ತರಿಸಿ ಪರೀಕ್ಷಿಸಿದಾಗ ಅದರಲ್ಲಿ ಹೆಪ್ಪುಗಟ್ಟಿದ ರಕ್ತ ಕಂಡು ಬಂದಿರುತ್ತದೆ.

5. ಮೃತಳ ಶ್ವಾಶಕೋಶಗಳು ಊದಿಕೊಂಡಿದ್ದು ಪೇಲವವಾಗಿರುತ್ತದೆ. ಅವುಗಳನ್ನು ಕತ್ತರಿಸಿದಾಗ ನೊರೆಯ ಜೊತೆ ಸ್ವಲ್ಪ ರಕ್ತ ಹೊರ ಬಂದಿರುತ್ತದೆ. ಮೆದುಳು ಸುಸ್ಥಿತಿಯಲ್ಲಿ

ಇದ್ದು ಪೇಲವವಾಗಿರುತ್ತದೆ. ಜಠರದಲ್ಲಿ 100 ಮಿಲಿ ಕೆನೆ ಬಣ್ಣದ ದ್ರವ ಪದಾರ್ಥ ಇದ್ದು, ಅದು ಅಸಹಜ ವಾಸನೆಯಿಂದ ಹೊರ ಹೊಮ್ಮಿರುತ್ತದೆ ಹಾಗೂ ಜಠರದ ಪದರದಲ್ಲಿ ಸಣ್ಣ ಪ್ರಮಾಣದಲ್ಲಿ ರಕ್ತ ಸ್ರಾವವಾಗಿರುತ್ತದೆ.

6. ರಕ್ತ ಹಾಗೂ ವಿಸೇರಾವನ್ನು ಶೇಖರಿಸಿ ಸಂರಕ್ಷಿಸಿ ಮೊಹರು ಮಾಡಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಡಲಾಗಿರುತ್ತದೆ.
7. ಮೆದುಳಿನ ಅರ್ಧ ಭಾಗ, ಹೃದಯ, ಶ್ವಾಸಕೋಶದ 4 ತುಣುಕುಗಳು, ಪಿತ್ತ ಜನಕಾಂಗದ 2 ತುಣುಕುಗಳು, 2 ಮೂತ್ರ ಪಿಂಡಗಳ ಅರ್ಧ ಅರ್ಧ ಭಾಗ, ಗುಲ್ಮ (Spleen) ಹಾಗೂ ಗರ್ಭಕೋಶವನ್ನು ಶೇಖರಿಸಿ ಸಂರಕ್ಷಿಸಿ ರೋಗ ಲಕ್ಷಣ ಶಾಸ್ತ್ರ ವಿಭಾಗಕ್ಕೆ Histopathology ಪರೀಕ್ಷೆಕಾಗಿ ಕಳುಹಿಸಿಕೊಡಲಾಗಿರುತ್ತದೆ.
8. ಸದರಿ ಕಂದುಗಟ್ಟಿದ ಗಾಯವು ಕೆಂಪು ಮಿಶ್ರಿತ ನೀಲಿ ಬಣ್ಣದಿಂದ ಕೂಡಿರುತ್ತದೆ. ಹಾಗೂ ಸದರಿ ಗಾಯವು ಮರಣ ಪೂರ್ವ ಗಾಯವಾಗಿರುತ್ತದೆ. ಶವ ಪರೀಕ್ಷೆಯನ್ನು ನಡೆಸಿದ ನಂತರ ನನ್ನ ಅಭಿಪ್ರಾಯವನ್ನು ರಾಸಾಯನಿಕ ಪರೀಕ್ಷೆ ಮತ್ತು Histopathology ವರದಿಯ ಫಲಿತಾಂಶಕ್ಕಾಗಿ ಕಾದಿರಿಸಿರುತ್ತೇನೆ. ನಾನು ನೀಡಿದ ಶವ ಪರೀಕ್ಷಾ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮೃತ ಅನಿತಾ ಇವರ ಶವ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.23 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ

ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.23(ಎ) ಎಂದು ಗುರುತಿಸಲಾಯಿತು.

9. ದಿಃ 25.05.2017 ರಂದು ಉಪಾ ಅಧೀಕ್ಷಕರು ಚಿಕ್ಕಮಗಳೂರು ಜಿಲ್ಲಾ ಪೊಲೀಸ್ ಇವರು ಕೊಟ್ಟ ವಿನಂತಿ ಪತ್ರ ಮತ್ತು ಅದರ ಜೊತೆ ರಾಸಾಯನಿಕ ಪರೀಕ್ಷಾ ವರದಿ, Histopathology ವರದಿ, ಹಾಸನ ಜಯಚಾಮರಾಜೇಂದ್ರ ಆಸ್ಪತ್ರೆ ಹಾಗೂ ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಯ ಮೃತಳಿಗೆ ಸಂಬಂಧಿಸಿದ ವೈದ್ಯಕೀಯ ದೃಢೀಕೃತ ನಕಲು ಪ್ರತಿಗಳನ್ನು ಸಲ್ಲಿಸಿರುತ್ತಾರೆ. ಅವುಗಳನ್ನು ಪರಿಶೀಲಿಸಿ ಮೃತಳ ಸಾವಿಗೆ ಸಂಬಂಧಿಸಿದಂತೆ ನನ್ನ ಅಂತಿಮ ಅಭಿಪ್ರಾಯವನ್ನು ನೀಡಿರುತ್ತೇನೆ. ಮೃತಳ ಸಾವು ಉದರಕ್ಕೆ ಉಂಟಾದ ಗಾಯಗಳಿಂದ ಆದ ಗರ್ಭಾವಸ್ಥೆಯ ನಂತರ ಉಂಟಾಗುವ ರಕ್ತ ಸ್ರಾವದಿಂದ ಸಂಭವಿಸಿದ Disseminated Intravascular Coagulation ನಿಂದ ಆಗಿರುತ್ತದೆ. ಸಾಕ್ಷಿಯು ನೀಡಿದ ಮೃತಳ ಸಾವಿಗೆ ಸಂಬಂಧಿಸಿದ ಅಂತಿಮ ಅಭಿಪ್ರಾಯವನ್ನು ನಿ.ಪಿ.24 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.24(ಎ) ಎಂದು ಗುರುತಿಸಲಾಯಿತು.

10. ಯಾವುದೇ ಒಬ್ಬ ಗರ್ಭವತಿ ಹೆಣ್ಣು ಮಗಳ ಹೊಟ್ಟೆಯ ಭಾಗಕ್ಕೆ ಜೋರಾಗಿ ಹಲ್ಲೆ ಮಾಡಿದ್ದಲ್ಲಿ ನಾನು ನಿ.ಪಿ.23 ಶವ ಪರೀಕ್ಷೆ ವರದಿಯಲ್ಲಿ ನಮೂದಿಸಿದ ಉದರಕ್ಕೆ ಮತ್ತು ಗರ್ಭಕೋಶಕ್ಕೆ ಸಂಬಂಧಿಸಿದ ಗಾಯಗಳು ಮತ್ತು ರಕ್ತ ಸ್ರಾವ ಆಗುತ್ತದೆ. ಮೃತಳನ್ನು ಪರೀಕ್ಷಿಸಿದಾಗ ಅವಳಿಗೆ ಗರ್ಭಪಾತವಾದ

ಬಗ್ಗೆ ಚಿಹ್ನೆಗಳು ಕಂಡು ಬಂದಿರುತ್ತವೆ. ಮೃತ ಗರ್ಭಕೋಶಕ್ಕೆ ಆದ ಲಕ್ಷಣಗಳು / ಚಿಹ್ನೆಗಳು ಮರಣ ಪೂರ್ವದಲ್ಲಿ ಆದ ಲಕ್ಷಣಗಳು / ಚಿಹ್ನೆಗಳು ಆಗಿರುತ್ತವೆ.

ಪಾಟೀ ಸವಾಲು ಶ್ರೀ ಹೆಚ್.ಜೆ.ಆರ್. ವಕೀಲರಿಂದ – 1 ಮತ್ತು 2 ನೇ ಆರೋಪಿತರ ಪರವಾಗಿ

11. ಆರೋಪಿ ಪರ ವಕೀಲರನ್ನು ಕೂಗಿಸಲಾಯಿತು, ಗೈರು ಹಾಜರು ಇದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ - ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ